ನಗುತ್ತಾ 'ಇಲ್ಲ ಇಲ್ಲ, ಇದು ನಾನು ಹೆರದ ಹೆಣ್ಮಗಳು! ನಾನು ಇದನ್ನು ಮದುವೆ ಮಾಡಿ ಕೊಟ್ಟ ಹಾಗೆ ನಿಮಗೆ ಒಂದೆರಡು ಹಣ್ಣು ಕೊಡಬಲ್ಲೆನೇ ಹೊರತು ಮಾರುವವಳಲ್ಲ' ಎಂದದ್ದು ಊರಲ್ಲಿ ಮತ್ತೆ ಸುದ್ದಿಯಾಯಿತು. ಇದರಿಂದಾಗಿ ಪ್ರತಿದಿನ ಎಂಬಂತೆ ಏಳೆಂಟು ಜನ ಬಂದು 'ನಮಗೂ ಒಂದೆರಡು ಹಣ್ಣು ಕೊಡಿ ಟೀಚರಮ್ಮ' ಎಂದರೂ ಟೀಚರಮ್ಮ ಕೋಪಿಸಿಕೊಳ್ಳಲಿಲ್ಲ. ಕೇಳಿದವರಿಗೆಲ್ಲ ಹಣ್ಣುಗಳನ್ನು ಕೊಡುತ್ತಾ ಹೋದರು. ಜೊತೆಗೆ ಎಲ್ಲರಿಗೂ ಒಂದು ವಿನಂತಿ ಮಾಡಿದರು. ಅದು 'ನೀವು ದಯವಿಟ್ಟು ಬೀಜವನ್ನು ತಪ್ಪಿಯೂ ಬಿಸಾಕಬೇಡಿ. ದಯವಿಟ್ಟು ಗಿಡಮಾಡಿ ನೆಟ್ಟುಬಿಡಿ' ಎನ್ನುವದಾಗಿತ್ತು.

ಇಷ್ಟಾದರೂ ಸೇವಂತಿಯಕ್ಕ ತಪ್ಪಿಯೂ ತನ್ನ ಮನೆಬಾಗಿಲಿಗೆ ಬಾರದೇ ಇದ್ದದ್ದು ನೋಡಿದ ಟೀಚರಮ್ಮ 'ಅಯ್ಯೋ ಈ ಅಕ್ಕ ಹೀಗೇಕೆ ಮಾಡಿದ್ದಾರೆ?' ಎಂದು ನಾಲ್ಕು ಹಣ್ಣು ಹಿಡಿದುಕೊಂಡು ಒಂದು ಸಂಜೆ ಸೇವಂತಿ ಅಕ್ಕನ ಮನೆ ಬಾಗಿಲಿಗೆ ಹೋದಾಗ 'ನೀವು ಬಂದೇ ಬರುತ್ತೀರಿ ಎಂದುಕೊಂಡಿದ್ದೆ ಟೀಚರಮ್ಮ! ಬನ್ನಿ ಬನ್ನಿ' ಎಂದು ಸ್ವಾಗತಿಸಿದ ಸೇವಂತಿಯಕ್ಕ 'ನನಗೆ ನೀವು ಊರಿಗೆಲ್ಲ ಹಣ್ಣು ಹಂಚುವುದು ಗೊತ್ತಿದೆ ಟೀಚರಮ್ಮ. ಆದರೆ ಹಾಗೆ ಕೇಳಿ ಪಡೆಯಲು

